**ಗುಂಡ:** ಮಚ್ಚಾ ನನ್ನ ಹುಡುಗಿಗಾಗಿ ನಾನು ನನ್ನ ಹೃದಯದಲ್ಲಿ ದೇವಸ್ಥಾನ ಕಟ್ಟಿದೆ. ಆದರೂ ನನ್ನ ಬಿಟ್ಟು ಹೋದಳು.
**ತಿಮ್ಮ:** ಇತ್ತೀಚೆಗೆ ಹುಡುಗಿಯರು ದೇವಸ್ಥಾನದಲ್ಲಿ ಎಲ್ಲಿರುತ್ತಾರೆ ಹೇಳು? ದೇವಸ್ಥಾನದ ಬದಲು ಪಾನಿಪೂರಿ ಗಾಡಿ ಕಟ್ಟಬೇಕಿತ್ತು. ಕನಿಷ್ಠ ದಿನಾ ಸಂಜೆಯಾದ್ರೂ ಬರ್ತಾ ಇದ್ದಳು.

**ಮೇಡಂ:** ನೋಡಿ ಮಕ್ಕಳೇ ಲೇಡೀಸ್ ಹಾಸ್ಟೆಲ್ ಕಡೆ ಹೋದ್ರೆ 100 ರೂಪಾಯಿ ದಂಡ, 2ನೇ ಸಲ ಹೋದ್ರೆ 200, 3ನೇ ಸಲ ಹೋದ್ರೆ 300 ದಂಡ ಕೊಡಬೇಕು.
**ಗುಂಡ:** ಮೇಡಂ ಮಂಥ್ಲಿ ಪಾಸ್‌ಗೆ ಎಷ್ಟಾಗುತ್ತೆ?

**ಮಗ:** ಅಪ್ಪ, ಸ್ಕೂಲ್ ಡ್ರಾಮಾದಲ್ಲಿ ನಂಗೆ ಅಪ್ಪನ ಪಾತ್ರ ಕೊಟ್ಟಿದ್ದಾರೆ.
**ಅಪ್ಪ:** ಲೋ ಪೆದ್ದ, ಯಾವುದಾದ್ರೂ ಡೈಲಾಗ್ ಇರೋ ಪಾತ್ರ ಕೇಳು.




ನಮ್ಮ ಯಜಮಾನರು ಟೊಮ್ಯಾಟೊ ವ್ಯಾಪಾರಕ್ಕೆ ಇಳಿದ ಮೇಲೆ ನಂಗೆ ಟೊಮ್ಯಾಟೊ ಜುಮ್ಕಿ, ಟೊಮ್ಯಾಟೊ ಸರ ಮಾಡಿಸಿಕೊಟ್ಟರು.




**ಗಂಡ:** ಊರಿಗೆ ಯಾವಾಗ ಹೋಗ್ತೀಯಾ?
**ಹೆಂಡ್ತಿ:** ಯಾಕೆ?
**ಗಂಡ:** ಸುಮ್ನೆ ಕೇಳ್ದೆ. ಹೆಂಗೂ ಟಿಕೆಟ್ ಖರ್ಚಿಲ್ವಲ್ಲ. ಹೋಗಿ ಬರಬಹುದು.
**ಹೆಂಡ್ತಿ:** ಓಹೋ ಟಿಕೆಟ್ ಖರ್ಚಿಲ್ಲ ಅಂತ ನನ್ನ ಊರಿಗೆ ಕಳುಹಿಸಿ ನಿಮ್ಮ ಹಳೇ ಲವರ್‌ಗಳನ್ನು ಟಿಕೆಟ್ ಖರ್ಚಿಲ್ಲದೆ ಕರೆಸಿಕೊಳ್ಳುವ ಉಪಾಯಾನಾ?

**ಡಾಕ್ಟರ್:** ನಿಮಗೆ ನ್ಯುಮೋನಿಯಾ ಬಂದಿತ್ತಾ ಯಾವತ್ತಾದರೂ.
**ಗುಂಡ:** ಹಾಂ ಸಾರ್ ಬಂದಿತ್ತು. ಸ್ಕೂಲ್‌ನಲ್ಲಿ ನ್ಯೂಮೋನಿಯಾಗೆ ಸ್ಪೆಲ್ಲಿಂಗ್ ಹೇಳು ಅಂದಾಗ.

**ಹೆಂಡತಿ:** ಇವತ್ತು ಚಹಾ ಮಾಡುವಾಗ ನಿಮ್ಮ ನೆನಪು ತುಂಬಾ ಆಯ್ತು.
**ಗಂಡ:** (ಪ್ರೀತಿಯಿಂದ) ಓಹ್ ಹೌದಾ?
**ಹೆಂಡತಿ:** ಹೌದು ರೀ... ತುಂಬಾ ನೆನಪಾಗುತ್ತಿತ್ತು.
**ಗಂಡ:** ಆವಾಗ ಏನು ಮಾಡಿದೆ?
**ಹೆಂಡತಿ:** ಶುಂಠಿಯನ್ನು ತಗೊಂಡು ಚೆನ್ನಾಗಿ ಕುಟ್ಟಿ ಕುಟ್ಟಿ ಪುಡಿ ಮಾಡಿದೆ.

**ಎಂಎಲ್‌ಎ ಮಗ:** ಮಮ್ಮಿ ನನಗೆ ಬಿಎಂಡಬ್ಲ್ಯೂ ಕಾರು ಬೇಕು.
**ಎಂಎಲ್‌ಎ ಹೆಂಡತಿ:** ಇರು ನಿಮ್ಮ ಅಪ್ಪನನ್ನ ಯಾರಾದ್ರೂ ಖರೀದಿ ಮಾಡಲಿ.

**ಪತ್ನಿ:** (ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುತ್ತಾ) ಛೇ... ನೋಡೋಕೆ ನಾನು ಎಷ್ಟು ಗಲೀಜಾಗಿದ್ದೀನಲ್ಲಾ? ರೀ ಏನಾದ್ರೂ ನನ್ನ ಬಗ್ಗೆ ಒಳ್ಳೆ ಮಾತಾಡ್ರೀ...
**ಪತಿ:** ನಿನ್ನ ಐ ಸೈಟ್ ನಿಜಕ್ಕೂ ಕರೆಕ್ಟಾಗಿದೆ ಕಣೇ!

ಸಂಗ್ರಹ: ಶರದ ಕುಲಕರ್ಣಿ, ಬೀದರ್